೧೪) ಬೀದರ್‌ನಿಂದ ಬೊಂಬಾಯಿ ಔರಂಗಬಾದ್ ಮತ್ತು ಹೈದರಾಬಾದ್‌ಗೆ ಸೂಪರ್ ಡಿಲೆಕ್ಸ್ ಬಸ್ಸನ್ನು ಓಡಿಸುವುದು.

SRI MOHAMMED LAIQUIDDIN.—Bidar District being a bord-r District has its border alongwith neighbouring States viz., Andhra Pradesh and Maharashtra. The people of Bidar District has got social and trade relations with their counterpart in the neighbouring States. The need for introduction of Super Delux Service from:

1) Bidar to Bombay,

2) Bidar to Aurangabad,

3) Bidar to Hyderabad,

4) Bidar to Nizamabad has been brought to the notice of the Government by the elected representatives and public several times and the Hon'ble Minister for Transport has been promising to introduce the above bus service since last 3 years. Inspite of repeated reminders and demands from the public, the above bus services are not introduced as yet.

In a recent notification issued by the Government of Karnataka on the basis of mutual agreement by or with Andhra Pradesh and Maharashtra, there is no mention of the above bus services. There is a great deal of disappointment among the travelling populace due to non-mention of the above routes in the above notification. The public of the respective areas of all the three States particularly of Bidar District is facing great hardship in the absence of the bus facilities from Bidar to the above cites of Maharashtra and Andhra Pradesh. I, therefore, sincerely urge upon the Government to introduce KSRTC Super Delux buses from Bidar to Bombay, Aurangabad, Hyderabad and Nizamabad immediately in the interest of the public.

ಶ್ರೀ ಪಿ.ಜಿ.ಆರ್. ಸಿಂಧ್ಯ (ಪೂರ್ವ ಸಾರಿಗೆ ಸಚಿವರು).—ಮಾನ್ಯ ಅಧ್ಯಕ್ಷರೆ, ನಾನು ಈ ಹೇಳಿಕೆಯನ್ನು ನೀಡಬಯಸುತ್ತೇನೆ.

ಬೀದರ್-ಬಾಂಬೆ (ಮುಂಬಯಿ) ಮತ್ತು ಬೀದರ್-ಔರಂಗಾಬಾದ್ ಈ ಎರಡೂ ಮಾರ್ಗಗಳು ಮಹಾರಾಷ್ಟ್ರಕ್ಕೆ ಓಡಿಸುವ ಅಂತರ ರಾಜ್ಯ ಸಾರಿಗೆಯಾಗಿರುತ್ತದೆ.

ಬೀದರ್-ಹೈದ್ರಾಬಾದ್ ಮತ್ತು ಬೀದರ್-ನೈಜಾಮಾಬಾದ್ ಈ ಎರಡೂ ಮಾರ್ಗಗಳು ಆಂಧ್ರ ಪ್ರದೇಶಕ್ಕೆ ಓಡಿಸಬೇಕಾದ ಅಂತರ ರಾಜ್ಯ ಸಾರಿಗೆಯಾಗಿರುತ್ತದೆ.

ಈ ಮೇಲಿನ ೪ ಮಾರ್ಗಗಳು ಅಂತರ ರಾಜ್ಯ ಸಾರಿಗೆ ಸೇವೆಗಳಾಗಿದ್ದು, ಅವನ್ನು ಓಡಿಸಬೇಕಾದಲ್ಲಿ ಕಾನೂನು ರೀತ್ಯಾ ಎರಡೂ ರಾಜ್ಯಗಳ ಮಧ್ಯೆ ಅಂತರ ರಾಜ್ಯ ಒಪ್ಪಂದವಾಗಬೇಕಾಗಿರುತ್ತದೆ, ಈಗಿನ ಒಪ್ಪಂದದ ಪ್ರಕಾರ ಸದರಿ ಮಾರ್ಗಗಳು ಮಹಾರಾಷ್ಟ್ರ ಮತ್ತು ಆಂಧ್ರ ಪ್ರದೇಶ ರಾಜ್ಯಗಳ ವಿಕಸ್ಥಾಪ್ಯ ಮಾರ್ಗಗಳಾಗಿದ್ದು ಸದರಿ ಮಾರ್ಗಗಳಲ್ಲಿ ಮಹಾರಾಷ್ಟ್ರ ಮತ್ತು ಆಂಧ್ರ ಪ್ರದೇಶ ರಾಜ್ಯಗಳ ರಸ್ತೆ ಸಾರಿಗೆ ಸಂಸ್ಥೆಗಳು ತಮ್ಮ ಬಸ್ಸುಗಳನ್ನು ಓಡಾಡಿಸುತ್ತಿವೆ. ಈಗ ಬೀದರ್‌ನಿಂದ ಪೂರ್ಣಿಯವರೆಗೆ ಎರಡೂ ರಾಜ್ಯಗಳ ಸಾರಿಗೆ ಸಂಸ್ಥೆ ಬಸ್ಸುಗಳು ಓಡಾಡುತ್ತಿವೆ.

ಸದರಿ ಮಾರ್ಗಗಳಲ್ಲಿ ಸುಖಾಸೀನ ಬಸ್ಸುಗಳನ್ನು ಓಡಾಡಿಸಬೇಕಾದಲ್ಲಿ ಸದರೀ ರಾಜ್ಯಗಳ ಸಾರಿಗೆ ಸಂಸ್ಥೆಗಳು ಒಂದು ಒಪ್ಪಂದಕ್ಕೆ ಬಂದು ಸಂಬಂಧಪಟ್ಟ ರಾಜ್ಯ ಸರ್ಕಾರಗಳು ನಂತರದಲ್ಲಿ ಮೋಟಾರು ವಾಹನ ಕಾಯಿದೆ ಪ್ರಕಾರ ಒಂದು ಒಪ್ಪಂದಕ್ಕೆ ಬಂದನಂತರ ಓಡಾಡಿಸಲು ಸಾಧ್ಯವಾಗುತ್ತದೆ. ಈ ಸಂಬಂಧದಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಆಂಧ್ರ ಮತ್ತು ಮಹಾರಾಷ್ಟ್ರ ಸಾರಿಗೆ ಸಂಸ್ಥೆಗಳೊಡನೆ ಚರ್ಚಿಸಿ ಒಪ್ಪಂದಕ್ಕೆ ಬರಲು ಸೂಚನೆ ನೀಡಲಾಗುವುದು.

ಈ ದಿಸೆಯಲ್ಲಿ ಸಾರಿಗೆ ಸಂಸ್ಥೆಗೆ ಸೂಕ್ತ ನಿರ್ದೇಶನವನ್ನು ನೀಡಲಾಗುವುದು. ಮತ್ತು ರಾಜ್ಯ ಸರಕಾರವೂ ಸಹ ಮಹಾರಾಷ್ಟ್ರ ಮತ್ತು ಆಂಧ್ರ ಪ್ರದೇಶ ಸರ್ಕಾರಗಳೊಡನೆ ಒಂದು ಒಪ್ಪಂದಕ್ಕೆ ಬರಲು ಚರ್ಚೆಯನ್ನು ಕೈಗೊಳ್ಳಲಾಗುವುದು.

೧೫೫ ಪುತ್ತೂರು ತಾಲ್ಲೂಕಿನ ಉಪ್ಪಿನಂಗಡಿಯಂ ಹತ್ತಿರ ನದಿಗಳ ಪ್ರವಾಹವನ್ನು ತಡೆಯಲು ತಡೆಗೋಡೆಗಳನ್ನು ನಿರ್ಮಿಸುವುದು

ಶ್ರೀ ವಿನಯಕುಮಾರ್ ಸೊರಕೆ (ಪುತ್ತೂರು).—ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲ್ಲೂಕಿನ ಉಪ್ಪಿನಂಗಡಿ ಪಟ್ಟಣವು ಹಿಂದೆ ತಾಲ್ಲೂಕು ಕೇಂದ್ರ ಸ್ಥಳವಾಗಿದ್ದು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪುರಾತನ ಪುಣ್ಯ ಕ್ಷೇತ್ರಗಳಾದ ಧರ್ಮಸ್ಥಳ ಹಾಗೂ ಸುಬ್ರಹ್ಮಣ್ಯಕ್ಕೆ ಭಕ್ತಯಾತ್ರಿಗಳು ಹಾದು ಹೋಗುವ, ಕೇಂದ್ರ ಸ್ಥಳವಾದ ದಕ್ಷಿಣ ಕನ್ನಡ ಜಿಲ್ಲೆಯ ಪ್ರಮುಖ ನದಿಗಳಾದ ಕುಮಾರಧಾರ ಹಾಗೂ ನೇತ್ರಾವತಿ ನದಿಯು ಸಂಗಮವಾಗುವ ಪುಣ್ಯ ಸ್ಥಳವಾದ ಈ ಪಟ್ಟಣಕ್ಕೆ ದಕ್ಷಿಣ ಕಾಶಿ ಎಂದೂ ಕೂಡಾ ಕರೆಯಲಾಗುತ್ತಿದೆ. ಮಂತ್ತು ಈ ಉಪ್ಪಿನಂಗಡಿ ಪಟ್ಟಣವು ನೆರೆ ಹೊರೆಯ ನದಿ ದಂಡೆಯಲ್ಲಿದ್ದು ಪ್ರಮುಖವಾದ ಒಂದು ವ್ಯಾಪಾರ ಕೇಂದ್ರ ಕೂಡ ಆಗಿದೆ. ಪಾಗೂ ಬೇರೆ ಬೇರೆ, ಸರಕಾರಿ ಇಲಾಖೆಗಳಿರುವ ಒಂದು ಕೇಂದ್ರ ಸ್ಥಳವು ಕೂಡ ಆಗಿರುವುದು. ಆದರೆ ಇಲ್ಲಿ ಇರುವ ಪ್ರಮುಖವಾದ ಒಂದು ತೊಂದರೆ ಎಂದರೆ, ಈ ನೇತ್ರಾವತಿ ಹಾಗೂ ಕುಮಾರ ಧಾರ ನದಿಗಳಲ್ಲಿ ಮಳೆಗಾಲದಲ್ಲಿ ನೆರೆಯಿಂದ ಪ್ರವಾಹ ಬಂದು ಈ ಪೇಟೆ ಪಟ್ಟಣಕ್ಕೂ ನುಗ್ಗಿಲ್ಲಿಂದ ಜನರಿಗೂ ತುಂಬಾ ತೊಂದರೆಯಾಗಿರುವುದು. ಈ ಪ್ರವಾಹವನ್ನು ತಡೆಗಟ್ಟಲು ಈ ನದಿಯ ದಂಡೆಗೆ ತಡೆಗೋಡೆಗಳನ್ನು ನಿರ್ಮಿಸಿ, ಇಲ್ಲಿಯ ನಿವಾಸಿಗಳಿಗೂ, ಯಾತ್ರಾರ್ಥಿಗಳಿಗೂ ರಕ್ಷಣೆಯನ್ನಾಗಿ ಮಾಡುವಂತೆ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು).—ಉತ್ತರವನ್ನು ತರಿಸಿಕೊಡುತ್ತೇನೆ.

ಬ್ರಹ್ಮಾವರದ ಕಂದಾಯ ಇಲಾಖೆಯ ರಾಜಸ್ವ ನಿರೀಕ್ಷಕರ ಕಚೇರಿಯು ದಿನಾಂಕ ೯-೫-೮೮ರಂದು ಮುನ್ಸೂಚನೆ ಇಲ್ಲದೆ ಮುಚ್ಚಿರುವುದು

ಶ್ರೀ ಬಸವರಾಜ್.—ಮಾನ್ಯ ಅಧ್ಯಕ್ಷರೆ, ಬ್ರಹ್ಮಾವರದ ಕಂದಾಯ ಇಲಾಖೆಯ ರಾಜಸ್ವ ನಿರೀಕ್ಷಕರ ಕಛೇರಿಗೆ ಗ್ರಾಮಾಂತರ ಪ್ರದೇಶಗಳಿಂದ ನಾನಾ ಕೆಲಸಗಳಿಗಾಗಿ ರೈತಾಪಿ ಜನರು ಬರುತ್ತಿದ್ದುದು ಸಹಜ. ಆದರೆ ಕಳೆದ ೯ನೇ ದಿನಾಂಕದಿಂದ ಸದರೆ ಇಲಾಖೆಯ ಬಾಗಿಲು ತೆರೆಯದೆ ಗ್ರಾಮಾಂತರ ಪ್ರದೇಶಗಳಿಂದ ಬರತಕ್ಕ ರೈತರಿಗೆ ಇದರಿಂದ ತೊಂದರೆಯಾಗಿದೆ. ಅಲ್ಲದೆ ಇದೇ ಕಛೇರಿಯಲ್ಲಿರುವ ಚಾಂತಾರು ಮಠಪಾಡಿಗೆ ಸಂಬಂಧಿಸಿದ ಗ್ರಾಮಕರಣಿಕರೂ ಕಛೇರಿಗೆ ಬರದಿರುವುದರಿಂದಾಗಿ ಗ್ರಾಮಸ್ಥರಿಗೆ ತೊಂದರೆಯಾಗಿರುವುದಾಗಿ ದೂರಲಾಗಿದ್ದು, ಈ ರೀತಿ ಕಂದಾಯ ಇಲಾಖೆಯ ಬಾಗಿಲನ್ನು ಮುನ್ಸೂಚನೆ ನೀಡದೆ ಮುಚ್ಚಿದ್ದು ಜನಗಳಿಗೆ ತೊಂದರೆಯಾಗಿರುವುದಕ್ಕೆ ಕಾರಣವೇನೆಂಬ ಬಗ್ಗೆ ಹಾಗೂ ಇದಕ್ಕೆ ಕಾರಣರಾದ ಅಧಿಕಾರಿಗಳ ಮೇಲೆ ಸರಕಾರ ಯಾವ ಕ್ರಮ ಕೈಗೊಂಡಿದೆ ಎಂಬ ಬಗ್ಗೆಯೂ ಈ ಸದನಕ್ಕೆ ಹೇಳಿಕೆ ನೀಡಬೇಕೆಂದು ಮಾನ್ಯ ಕಂದಾಯ ಮಂತ್ರಿಗಳನ್ನು ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಕಂದಾಯ ಸಚಿವರ ಪರವಾಗಿ).—ಮಾನ್ಯ ಅಧ್ಯಕ್ಷರೆ, ಬ್ರಹ್ಮಾವರದ ರಾಜಸ್ವ ನಿರೀಕ್ಷಕರು ಬ್ರಹ್ಮಾವರದ ಕಂದಾಯ ಫಿರ್ಕಾದ ೨೯ ಕಂದಾಯ ಗ್ರಾಮಗಳ ಕೆಲಸವನ್ನು